<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>
<u>ಘನ ನ್ಯಾಯಾಲಯದಲ್ಲಿ</u>

<u>ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್ 48/2014</u>

ದಿನಾಂಕಃ 13.07.2022
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

ಪ್ರಾ.ಸಾಃ 5 (ಚಾ.ಸಾ.6)

| | | |
|---|---|---|
| ಹೆಸರು | ಃ | ಮಾರುತಿ |
| ತಂದೆಯ ಹೆಸರು | ಃ | ಪದ್ಮನಾಭಯ್ಯ |
| ವಯಸ್ಸು | ಃ | 50 ವರ್ಷ |
| ಉದ್ಯೋಗ | ಃ | ವ್ಯವಸಾಯ ಮತ್ತು ಚಿತ್ರಮಂದಿರ ಮಾಲೀಕರು |
| ವಾಸ ಸ್ಥಳ | ಃ | ರಾಮನಗರ |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ</u>

ನಾನು ಶಾನ್ ಥಿಯೇಟರನ ಮಾಲೀಕ ಇರುತ್ತೇನೆ.

2. ತಾಃ 06.08.2010 ರಂದು ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ಶಾನ್ ಥಿಯೇಟರ ಕಾಂಪೌಂಡ್ ಒಳಗೆ 7-8 ಜನ ಬಂದರು. ನಾನು ವಿಚಾರಿಸಿದಾಗ ನಾವು ಲೋಕಾಯುಕ್ತ ಪೊಲೀಸರು, ರೈಡ್ ಮಾಡಲು ಬಂದಿದ್ದೇವೆ ಎಂದು ತಿಳಿಸಿದರು. ಶಾನ್ ಥಿಯೇಟರ್ ಒಳಗಡೆಯಿಂದ ಇಬ್ಬರನ್ನು ಹೊರಗೆ ಕರೆದುಕೊಂಡು ಬಂದರು. ಲಂಚ ತೆಗೆದುಕೊಳ್ಳುವ ವಿಚಾರದಲ್ಲಿ ಅವರನ್ನು ಅರೆಸ್ಟ ಮಾಡುತ್ತಿದ್ದೇವೆ ಎಂದು ತಿಳಿಸಿದರು.

3. ಲೋಕಾಯುಕ್ತ ಪೊಲೀಸರು ವಿದ್ಯುತ್ ಸಂಪರ್ಕ ಬಗ್ಗೆ ಕಂಪ್ಯೂಟರ ಅಪರೇಟ್ ಮಾಡಲು ಕೇಳಿದರು. ನಾನು ಅದಕ್ಕೆ ಅವಕಾಶ ಮಾಡಿಕೊಟ್ಟೆನು. ಈ ಪ್ರಕಾರ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

4. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಈಗ ಪ್ರಕರಣ ನಡೆದು ಸುಮಾರು 10-12 ವರ್ಷಗಳಾಗಿರುವುದರಿಂದ ಗುರುತಿಸಲಾಗುವುದಿಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ವಿಎಂ., ವಕೀಲರಿಂದಃ</u>**

4. ನನ್ನ ತಂದೆ ಸುಮಾರು 2 ತಿಂಗಳ ಹಿಂದೆ ಮೃತಪಟ್ಟಿದ್ದಾರೆ. ಆ ಗನನ್ನ ತಂದೆ ಥಿಯೇಟರ ಮಾಲೀಕರಾಗಿದ್ದರು. ಘಟನೆಯ ಸಮಯದಲ್ಲಿ ನಾನು ಅಲ್ಲಿ ಇರಲೇ ಇಲ್ಲ, ನಾನು ಪೊಲೀಸರ ಮಾತುಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**
**<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**